

# ರಕ್ತದ ಕಾಯಿಲೆ: ಅಸ್ಥಿಮಜ್ಜೆ ಕಸಿ

ರಕ್ತಕ್ಕೆ ಸಂಬಂಧಿಸಿದ ಹಲವು ಕಾಯಿಲೆಗಳಿಗೆ ಅಸ್ಥಿಮಜ್ಜೆ ಕಸಿ ವರದಾನ. ಬೋನ್‌ಮಾರೊ ಟ್ರಾನ್ಸ್‌ಪ್ಲಾಂಟ್ (ಬಿಎಂಟಿ) ಎಂದು ಕರೆಯಲಾಗುವ ಈ ಚಿಕಿತ್ಸಾ ವಿಧಾನ ಇತ್ತೀಚೆಗೆ ಬಹಳ ಜನಪ್ರಿಯವಾಗುತ್ತಿದೆ. ಸಾಮಾನ್ಯವಾಗಿ ವಂಶವಾಹಿ ತೊಂದರೆಯಿಂದ ಬರುವ ರಕ್ತದ ಕಾಯಿಲೆಗಳಿಗೆ ದಾನಿಗಳಿಂದ ಪಡೆದ ಅಸ್ಥಿಮಜ್ಜೆ ಕಸಿ ಮಾಡಿದರೆ ಸಂಪೂರ್ಣವಾಗಿ ಗುಣಮುಖರಾಗಲು ಸಾಧ್ಯ. ಬೆಂಗಳೂರಿನ ನಾರಾಯಣ ಹೆಲ್ತ್‌ಸಿಟಿ ಹಾಗೂ ಮಜುಂದಾರ್ ಶಾ ಕ್ಯಾನ್ಸರ್ ಆಸ್ಪತ್ರೆ ಇದುವರೆಗೆ 1000 ಬೋನ್‌ಮಾರೊ ಟ್ರಾನ್ಸ್‌ಪ್ಲಾಂಟ್ ಅನ್ನು ಯಶಸ್ವಿಯಾಗಿ ಪೂರೈಸಿದೆ.

■ ಉಮಾ ಅನಂತ್

ಕೋಲಾರ ಮೂಲದ ಹತ್ತು ವರ್ಷದ ಬಾಲಕ ಸ್ಯಾಮ್‌ಗೆ ಕೆಲ ತಿಂಗಳ ಹಿಂದೆ ತುಟಿಯ ಬಳಿ ಅರಿಶಿನ ಬಣ್ಣದ ಕಲೆಯೊಂದು ಕಾಣಿಸಿತ್ತು. ವಿಪರೀತ ಬಳಲಿಕೆ, ಜ್ವರ ಬೇರೆ. ಕೆಜಿಎಫ್‌ನ ವೈದ್ಯರ ಬಳಿ ತೋರಿಸಿದಾಗ ರಕ್ತ ಪರೀಕ್ಷೆ ಮಾಡಿಸಲು ಸೂಚಿಸಲಾಯಿತು. ಆಗ ವೈದ್ಯರು ಸಲಹೆ ಮಾಡಿದ್ದು ಹುಡುಗನನ್ನು ವೆಲ್ಲೂರ್‌ನ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಬೇಕು ಎಂದು. ಅದರಂತೆ ವೆಲ್ಲೂರ್‌ನ ಸಿಎಂಸಿ ಆಸ್ಪತ್ರೆಯಲ್ಲಿ ರಕ್ತ ಪರೀಕ್ಷೆ ಮಾಡಿಸಿದಾಗ ರಕ್ತದಲ್ಲಿನ ಪ್ಲೇಟ್‌ಲೆಟ್ ಸಂಖ್ಯೆ 10 ಸಾವಿರದಿಂದ 5 ಸಾವಿರಕ್ಕೆ ಇಳಿದಿತ್ತು. ಮರುದಿನ ಮತ್ತೂ ಕಡಿಮೆಯಾಗಿತ್ತು. ಅಲ್ಲದೆ ಹಿಮೋಗ್ಲೋಬಿನ್ ಕೇವಲ 4.5 ಗ್ರಾಂನಷ್ಟಿತ್ತು. ಆಗ ಈ ಬಾಲಕನಿಗೆ ಅಸ್ಥಿಮಜ್ಜೆ ಕಸಿ ಒಂದೇ ದಾರಿ ಎಂದು ವೈದ್ಯರು ಸೂಚಿಸಿದರು. ಆ ಆಸ್ಪತ್ರೆಯಲ್ಲಿ ಅಸ್ತಿಮಜ್ಜೆ ಕಸಿ (ಬೋನ್‌ಮಾರೊ ಟ್ರಾನ್ಸ್‌ಪ್ಲಾಂಟ್)ಗೆ ಸುಸಜ್ಜಿತ ವ್ಯವಸ್ಥೆ ಇಲ್ಲದೇ ಇರುವ ಕಾರಣ ಬೆಂಗಳೂರು ನಾರಾಯಣ ಹೆಲ್ತ್‌ಸಿಟಿಯ ಮಜುಂದಾರ್ ಶಾ ಆಸ್ಪತ್ರೆಗೆ ಕರೆತರಲಾಯಿತು. ಇಲ್ಲಿ ಆತನನ್ನು ಪರೀಕ್ಷಿಸಿದ ತಜ್ಞ ವೈದ್ಯರು ಅಸ್ಥಿಮಜ್ಜೆ ಕಸಿ ಅನಿವಾರ್ಯ ಎಂದರು. ಕಳೆದ ತಿಂಗಳು ಜರ್ಮನಿಯ ದಾನಿಯೊಬ್ಬರು ನೀಡಿದ ಅಸ್ಥಿಮಜ್ಜೆಯನ್ನು ಸ್ಯಾಮ್‌ಗೆ ಕಸಿ ಮಾಡಲಾಯಿತು. ಈಗ ಸ್ಯಾಮ್ ಸಂಪೂರ್ಣವಾಗಿ ಚೇತರಿಸಿಕೊಂಡಿದ್ದಾನೆ. ಐದನೇ ತರಗತಿಯ ಹುಡುಗ ಎಂದಿನಂತೆ ಶಾಲೆಗೆ ಹೋಗುತ್ತಿದ್ದಾನೆ.

***